ಎಲ್.ಎ.ಸಿ.ನಂ.243/2022
ಪಿ.ಡಬ್ಲ್ಯೂ: 01

**<u>ಸಾಕ್ಷಿಯನ್ನು ಇಂದು ದಿ.13.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.KHN., ವಕೀಲರಿಂದ</u>**

ನಾನು ಈ ಕೆಳಗಿನಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| ಅ. ನಂ | ದಾಖಲೆಗಳ ವಿವರ | ನಿಶಾನೆ |
|---|---|---|
| 1 | ಹೆಸ್ಕಾಂನವರು ನೀಡಿದ ಸೇವಾ ಪ್ರಮಾಣ ಪತ್ರ | 7 |

ಆದ್ದರಿಂದ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು: ಶ್ರೀ.ಎಸ್.ಎಸ್.ಜಿ., ವಿಶೇಷ ಸರಕಾರಿ ವಕೀಲರಿಂದ 1 ರಿಂದ 3 ನೇ ಎದುರುದಾರರ ಪರವಾಗಿ:</u>**

1) ನನ್ನ ಜಮೀನು ಸರ್ವೆ ನಂ.208/1 ಇದ್ದು, ಅದು ಒಟ್ಟು 03 ಎಕರೆ 36 ಗುಂಟೆ ಇದ್ದು, ಅದರಲ್ಲಿ 21 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ.

2) **ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ಕನ್ನೂರ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನನ್ನ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ನನ್ನ ಜಮೀನು ನೀರಾವರಿ ಜಮೀನು ಇರುತ್ತದೆ. ನಿ.ಪಿ.7 ರಲ್ಲಿ ನನ್ನ ಹೆಸರಿನಲ್ಲಿ ಇರುತ್ತದೆ.

6) ನಿ.ಪಿ.2 ರಿಂದ 5 ಕನ್ನೂರ ಮತ್ತು ತಿಡಗುಂದಿ ಗ್ರಾಮಗಳ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ನಿ.ಪಿ.2 ರಿಂದ 5 ಖರೀದಿ ಪತ್ರದಲ್ಲಿ ನಮೂದಿಸಲಾದ ಜಮೀನುಗಳನ್ನು ಪವನ ವಿದ್ಯುತ್ ಉತ್ಪಾದನಾ ಯಂತ್ರ ಅಳವಡಿಸಲು ಖರೀದಿಸಿರುತ್ತಾರೆ ಎನ್ನುವುದು ನಿಜ. ನಿ.ಪಿ.2 ಮತ್ತು 3 ನ್ನು ಹೊರತುಪಡಿಸಿ ನಮ್ಮೂರಿನಲ್ಲಿ ಸಾಕಷ್ಟು ಜಮೀನುಗಳು ಕೃಷಿ ಉದ್ದೇಶಕ್ಕಾಗಿ ಮಾರಾಟ ಆಗಿರುತ್ತವೆ ಎನ್ನುವುದು ನಿಜ. ಸದರಿ ಖರೀದಿ ಪತ್ರಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎನ್ನುವುದು ನಿಜ. ನಾನು ನಮ್ಮೂರು ಕನ್ನೂರಿನ ಎರಡು ಸರ್ವೆ ನಂಬರ್‌ಗಳ ಖರೀದಿ ಪತ್ರಗಳನ್ನು ಹಾಜರುಪಡಿಸಿದ್ದು, ಸದರಿ ಜಮೀನುಗಳಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 4-5 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ತಿಡಗುಂದಿ ಗ್ರಾಮದ ಖರೀದಿ ಪತ್ರದ

ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 10-15 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. ಕನ್ನೂರಿನಿಂದ ತಿಡಗುಂದಿ ಗ್ರಾಮಕ್ಕೆ ಹೋಗಬೇಕಾದರೆ ಮಖಣಾಪೂರ ಮತ್ತು ಮಖಣಾಪೂರ ತಾಂಡಾ ಮಾರ್ಗವಾಗಿ ಹೋಗಬೇಕಾಗುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಮಖಣಾಪೂರ ತಾಂಡಾ ಮಾರ್ಗವಾಗಿ ಹೋಗಬೇಕಾಗುತ್ತದೆ ಎಂದು ನುಡಿದಿರುತ್ತಾರೆ. ನನ್ನ ಜಮೀನಿಗೂ ಖರೀದಿ ಪತ್ರದ ಜಮೀನುಗಳಿಗೂ ಎಷ್ಟು ಅಂತರ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

7) ನಾನು ಒಂದು ಎಕರೆಗೆ 70 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ.ಎಸ್.ಎಸ್.ಎಸ್., ವಕೀಲರಿಂದ 4 ನೇ ಎದುರುದಾರರ ಪರವಾಗಿಃ</u>**

8) ಭೀಮಾಶಂಕರ ನನ್ನ ಅಣ್ಣ ಇರುತ್ತಾರೆ. 1 ನೇ ಎದುರುದಾರರು ನನ್ನ ಹಾಗೂ ನನ್ನ ಅಣ್ಣನಾದ ಭೀಮಾಶಂಕರ ರವರ ಹೆಸರಿನಲ್ಲಿ ಐತೀರ್ಪು ಘೋಷಿಸಿರುತ್ತಾರೆ ಎನ್ನುವುದು ನಿಜ. ನಮ್ಮಿಬ್ಬರದ್ದು ಸಾಮೂಹಿಕ ಹಿಸ್ಸೆ ಇರುತ್ತದೆ ಎನ್ನುವುದು ನಿಜ. ಸದರಿ ಭೀಮಾಶಂಕರ ನನಗೆ ಮೊಕ್ತಿಯಾರ ಪತ್ರವನ್ನು ನೀಡಿರುತ್ತಾರೆ. ಸದರಿ ಮೊಕ್ತಿಯಾರ ಪತ್ರವನ್ನು 1 ನೇ ಎದುರುದಾರರ ಕಛೇರಿಗೆ ಹಾಜರುಪಡಿಸಿರುತ್ತೇನೆ. ಸದರಿ ಮೊಕ್ತಿಯಾರ ಪತ್ರದ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಿ.ಪಿ.1 ಕ್ಕೆ ನನ್ನ ಸಹೋದರನಾದ ಭೀಮಾಶಂಕರ ಸಹಿ ಮಾಡಿರುವುದಿಲ್ಲ ಎನ್ನುವುದು ನಿಜ. ನಮ್ಮ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ವಿಷಯ ನಮಗೆ 2017 ರಲ್ಲಿ ಗೊತ್ತಾಗಿತ್ತು ಎನ್ನುವುದು ನಿಜ. ನಮ್ಮ ಜಮೀನು ನೀರಾವರಿ ಜಮೀನು ಇರುವ ಕುರಿತು 1 ನೇ ಎದುರುದಾರರ ಕಛೇರಿಗೆ ದಾಖಲೆಯನ್ನು ಸಲ್ಲಿಸಿರುತ್ತೇನೆ. ಸದರಿ ತಕರಾರು ಕೊಟ್ಟ ಬಗ್ಗೆ ಸ್ವೀಕೃತಿ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ಸದರಿ ತಕರಾರನ್ನು ಸಲ್ಲಿಸಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ.

9) 1 ನೇ ಎದುರುದಾರರು ನಮ್ಮ ಜಮೀನು ಅಳತೆ ಮಾಡಲು ಬಂದಿದ್ದರು ಎನ್ನುವುದು ನಿಜ. 1 ನೇ ಎದುರುದಾರರು ನಮ್ಮ ಸಮಕ್ಷಮ ಜಂಟಿ ಸರ್ವೆ ಮಾಡಿರುತ್ತಾರೆ ಎನ್ನುವುದು ನಿಜ.

10) ಸಾಮಾನ್ಯವಾಗಿ ನೀರಾವರಿ ಜಮೀನುಗಳಿಗೆ ಹೆಚ್ಚು ಬೆಲೆ ಬರುತ್ತದೆ ಎನ್ನುವ ವಿಷಯ ನನಗೆ ಗೊತ್ತಿರುತ್ತದೆ ಎನ್ನುವುದು ನಿಜ. ನಮ್ಮ ಜಮೀನು ನೀರಾವರಿ ಜಮೀನು ಇತ್ತು ಎಂದು ತೋರಿಸಲು 2017 ಕ್ಕಿಂತ ಪೂರ್ವದಲ್ಲಿಯ ಗೇಣಿ ಮತ್ತು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುವುದಿಲ್ಲ. 1 ನೇ ಎದುರುದಾರರು ನಮ್ಮ ಜಮೀನಿಗೆ ಅಳತೆ ಮಾಡಲು ಬಂದಾಗ ನಮ್ಮ ಜಮೀನದಲ್ಲಿ ಯಾವುದೇ ನಿರಾವರಿ ಬೆಳೆ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಜಮೀನದಲ್ಲಿ ಯಾವುದೇ ಬೆಳೆ ಇರದೇ ಇದ್ದುದ್ದರಿಂದ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

11) ನಮ್ಮೂರಿನಲ್ಲಿ ಸಾಕಷ್ಟು ನೀರಾವರಿ ಮತ್ತು ಒಣಬೇಸಾಯದ ಜಮೀನುಗಳು ಮಾರಾಟ ಆಗಿರುತ್ತವೆ ಎನ್ನುವುದು ನಿಜ. ನಮ್ಮೂರಿನಲ್ಲಿ ಮಾರಾಟವಾದಂತಹ ನೀರಾವರಿ ಮತ್ತು ಒಣಬೇಸಾಯದ ಜಮೀನುಗಳು ಖರೀದಿ ಪತ್ರಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸುವ ಕುರಿತು ನನಗೆ ಜ್ಞಾನ ಇರದೇ ಇದ್ದುದ್ದರಿಂದ ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮೂರಿನಲ್ಲಿ ಮಾರಾಟ ಆದಂತಹ ಜಮೀನುಗಳ ಖರೀದಿ ಪತ್ರಗಳ ಆಧಾರದ ಮೇಲೆ ನಮ್ಮ ಜಮೀನಿಗೂ ಸಹ ಮಾರುಕಟ್ಟೆ ಬೆಲೆ ನಿರ್ಧರಿಸಬೇಕೆಂದು ನಿ.ಪಿ.1 ರಲ್ಲಿ ನಮೂದಿಸಿರುವುದಿಲ್ಲ. ನಿ.ಪಿ.2, 3 ಮತ್ತು 5 ರಲ್ಲಿ ನಮೂದಿಸಲಾದ ಜಮೀನುಗಳ ಭೂಪರಿವರ್ತನೆಗಾಗಿ ಅರ್ಜಿ ಕೊಟ್ಟ ಬಗ್ಗೆ ನಮೂದು ಇರುತ್ತದೆ ಎನ್ನುವುದು ನಿಜ. ನಿ.ಪಿ.5 ಖರೀದಿ ಪತ್ರದ ಜೊತೆಗೆ ಸದರಿ ಜಮೀನು ಭೂಪರಿವರ್ತನೆಗೊಂಡ ಕುರಿತು ಜಿಲ್ಲಾಧಿಕಾರಿಗಳ ಆದೇಶವನ್ನು ಸಹ ಲಗತ್ತಿಸಲಾಗಿದೆ ಎನ್ನುವುದು ನಿಜ. ನಿ.ಪಿ.2 ರಿಂದ 5 ರಲ್ಲಿ ನಮೂದಿಸಲಾದ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಸಿರುತ್ತಾರೆ ಎನ್ನುವುದು ನಿಜ. ನಿ.ಪಿ.2 ರಿಂದ 5 ರಲ್ಲಿ ನಮೂದಿಸಲಾದ ಖರೀದಿ ಪತ್ರಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

12) ಕನ್ನೂರ ಗ್ರಾಮದ ಸ.ನಂ.258 ನಮ್ಮ ಜಮೀನಿಗೆ ಸಮೀಪದಲ್ಲಿದೆ ಎನ್ನುವುದು ನಿಜ. ಸದರಿ ಜಮೀನಿನ ಖರೀದಿ ಪತ್ರವನ್ನು ಪರಿಗಣಿಸಿ ನಮ್ಮ ಜಮೀನಿಗೂ ಸಹ ಸೂಕ್ತ ಮಾರುಕಟ್ಟೆ ಬೆಲೆ ನಿರ್ಧರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

13) 1 ನೇ ಎದುರುದಾರರು ನಮ್ಮ ಜಮೀನಿನ ಸಪೂರ್ಣ ಸ್ಥಿತಿಗತಿಯನ್ನು ಪರಿಗಣಿಸಿ ಯೋಗ್ಯವಾದ ಮಾರುಕಟ್ಟೆ ಬೆಲೆ ನಿರ್ಧರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಯೋಗ್ಯ ಬೆಲೆ ನಿರ್ಧರಿಸದೇ ಇದ್ದುದ್ದರಿಂದ ನಾನು ರೆಫರೆನ್ಸ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.